# ಪುಸ್ತಕ ಪರಿಚಯ



## ವಿವೇಕಾನಂದ ಕವಿತಾವಳಿ

(ಸ್ವಾಮಿ ವಿವೇಕಾನಂದರ ಕವಿತೆಗಳ ಕನ್ನಡ ಅನುವಾದ)
ಅನುವಾದಕರು : ಮುರಳೀಧರ. ಎಚ್. ಎನ್.,
ಪ್ರಕಾಶಕರು: ವಿವೇಕಹಂಸ ಪ್ರಕಾಶನ, ೩ನೆಯ
ಅಡ್ಡರಸ್ತೆ, ಶ್ರೀನಿವಾಸ ನಗರ, ಬೆಂಗಳೂರು
ಪುಟಗಳು : ೮೮, ಬೆಲೆ : ರೂ.೩೬/-

ಸ್ವಾಮಿ ವಿವೇಕಾನಂದರ ಭಾಷಣಗಳು, ಲೇಖನಗಳು, ಪತ್ರಗಳು ಸ್ಫೂರ್ತಿಯ ಸೆಲೆಯಾಗಿ ಜನಮಾನಸದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದಿವೆ. ಅಷ್ಟೇ ಸ್ಫೂರ್ತಿಯುತವಾದ ಮತ್ತೊಂದು ಸಾಹಿತ್ಯ ಪ್ರಕಾರ ಕವಿತಾರಚನೆ—ಅದರಲ್ಲೂ ಸ್ವಾಮಿ ವಿವೇಕಾನಂದರರದು ಸಿದ್ಧಹಸ್ತ ಎಂಬುದಕ್ಕೆ ಅವರು ಸಂಸ್ಕೃತ, ಬಂಗಾಳಿ ಮತ್ತು ಇಂಗ್ಲಿಷ್‌ನಲ್ಲಿ ರಚಿಸಿರುವ ಕವನಗಳೇ ಸಾಕ್ಷಿಯಾಗಿವೆ. ಸ್ವಾಮಿ ವಿವೇಕಾನಂದರ ಪ್ರತಿಭೆಯಿಂದ ಹೊರಬಂದ ಸಾಹಿತ್ಯದ ಯಾವ ಪ್ರಕಾರವೇ ಆಗಲಿ ಅವುಗಳ ಹಿಂದೆ ಒಂದು ಅದ್ಭುತ ಕವಿಚೇತನ ಅತ್ಯಂತ ಪಾರ ದರ್ಶಕವಾಗಿ ಕ್ರಿಯಾಶೀಲವಾಗಿರುವುದನ್ನು ಕಾಣಬಹುದು. ಕೆಲ ವೊಮ್ಮೆ ತಮ್ಮ ಶಿಷ್ಯರಿಗೆ ಮತ್ತು ಆಪ್ತರಿಗೆ ಬರೆದ ಅವರ ಪತ್ರಗಳು ಕವನರೂಪದಲ್ಲೇ ಇರುವುದಲ್ಲದೆ ಅವರ ಬಹುತೇಕ ನುಡಿಗಳಲ್ಲಿ ಪತ್ರಗಳಲ್ಲಿ ಕಾವ್ಯಭಾಷೆ ಉಕ್ಕಿ ಹರಿಯುತ್ತಿದ್ದುದನ್ನು ಕಾಣಬಹುದು. ಅಂತಹ ಕವಿಹೃದಯಸ್ಪಂದನದಿಂದ ಮೂಡಿ ಬಂದಿರುವ ಕವಿತಾವಳಿ ಯಿಂದ ಮೂವತ್ತು ಕವನಗಳನ್ನು ಆಯ್ಕೆ ಮಾಡಿಕೊಂಡು ಅವರ ಕವಿತಾ ಪ್ರತಿಭೆಯನ್ನು ಕನ್ನಡಿಗರಿಗೆ ಪರಿಚಯಿಸಲು ಉತ್ಸಾಹದಿಂದ ಮುಂದೆ ಬಂದಿರುವವರು ಶ್ರೀಮಾನ್ ಮುರಳೀಧರ ಅವರು. ಅವರ ವಿವೇಕಾನಂದ ಕವಿತಾವಳಿ ಸ್ವಾಮಿ ವಿವೇಕಾನಂದರ ಕವನಗಳ ಕನ್ನಡ ಭಾಷೆಯ ಅನುವಾದವಾಗಿದ್ದು ಇದರಲ್ಲಿ ಸ್ವಾಮೀಜಿಯವರ ಮೂಲ ಕವನಗಳ ಸಾರವನ್ನು ಗ್ರಹಿಸಬಹುದಾಗಿದೆ. ಕನ್ನಡದಲ್ಲಿನ ಇಂತಹ ಮೌಲಿಕ ಗ್ರಂಥವನ್ನು ಪರಿಚಯಿಸಲು ಪುಸ್ತಕದ ಮುನ್ನುಡಿಯಲ್ಲಿರುವ ಸ್ವಾಮಿ ಜಗದಾತ್ಮಾನಂದಜಿಯವರ ನುಡಿಗಳನ್ನು ಉಲ್ಲೇಖಿಸು ವುದಕ್ಕಿಂತ ಸೂಕ್ತವಾದುದು ಬೇರೊಂದಿಲ್ಲ : "ಈ ಕವನಗಳಲ್ಲಿ ವಸ್ತುವೈವಿಧ್ಯವಿದೆ. ವಿಶಿಷ್ಟವಾದ ಸೊಗಸಿದೆ, ಅನನ್ಯವಾದ ತೇಜಸ್ಸಿದೆ. ಹೃದಯದ ಅಂತರಾಳವನ್ನು ಮುಟ್ಟುವ ತಟ್ಟುವ ಭಾವತೀವ್ರತೆಯಿದೆ. ಪ್ರಕೃತಿ ಸೌಂದರ್ಯದ ಕಣ್ಣುಕಟ್ಟುವಂತಹ ವರ್ಣನೆಯಿದೆ. ಅನಿ ರ್ವಚನೀಯ ಅಧ್ಯಾತ್ಮದ, ಅನುಭಾವದ ಅದ್ಭುತ ಅಭಿವ್ಯಕ್ತಿಯೂ ಇದೆ. ಉತ್ತಮ ಕಾವ್ಯದಲ್ಲಿರಬೇಕಾದ ಬುದ್ಧಿಭಾವನೆಗಳ ವಿದ್ಯುದಾ ಲಿಂಗನ, ಕಲ್ಪನೆ ವಿಚಾರ ಅನುಭವಗಳ ವಿಶಿಷ್ಟಪಾಕ, ಸಮಕಾಲೀನತೆ ಯೊಂದಿಗೆ ಸಾರ್ವಕಾಲಿಕತೆ, ವೈಯಕ್ತಿಕತೆಯೊಂದಿಗೆ ಸಾರ್ವತ್ರಿಕತೆಗಳು ಮೇಳೈಸಿವೆ. ಸ್ವಾಮೀಜಿ ಇವುಗಳನ್ನು ರಚಿಸಿ ಆಗಲೇ ೧೦೬ ವರ್ಷ ಗಳಾದರೂ ಇತ್ತೀಚೆಗೆ ಬರೆದ ಆಧುನಿಕ ಕವನಗಳಂತೆ ನವೀನತೆ ಯಿಂದ ನಳನಳಿಸುತ್ತಿವೆ." ಸ್ವಾಮಿ ವಿವೇಕಾನಂದರ ಕವಿಪ್ರತಿಭೆಯ ಮೇಲೆ ಹೆಚ್ಚಿನ ಬೆಳಕು ಚೆಲ್ಲುವ, ಅವರ ಕಲಾತ್ಮಕ ಅಭಿವ್ಯಕ್ತಿಯ ಹೆಚ್ಚಿನ ಅಧ್ಯಯನಕ್ಕೆ ಪ್ರೇರೇಪಣೆ ನೀಡುವ ಒಂದು ವಿಶಿಷ್ಟವಾದ ಅನುವಾದ ಇದು. ಓದುಗರಿಗೆ ವಿಶಿಷ್ಟ ಅನುಭವವನ್ನು ನೀಡುವ ಈ ಸಂಕಲನ ಕನ್ನಡಿಗರ ಮೆಚ್ಚುಗೆಯನ್ನು ಗಳಿಸುವುದರಲ್ಲಿ ಸಂದೇಹವಿಲ್ಲ.

—ಸತ್ಯಾಗಾಲಂ ಪಾರ್ಥಸಾರಥಿ

## ಗ್ರಾಮಜೀವನ

ಲೇಖಕರು : ಎಂ.ಟಿ. ವಿಶ್ವನಾಥಯ್ಯ, ಪ್ರಕಾಶಕರು:
ಸರ್ವಮಂಗಳ ಪ್ರಕಾಶನ, ೭೫೬, ಮನುಜಪಥ,
೩ನೆಯ ಅಡ್ಡರಸ್ತೆ, ಇ ಮತ್ತು ಎಫ್ ಬ್ಲಾಕ್,
ಕುವೆಂಪು ನಗರ, ಮೈಸೂರು ೫೭೦ ೦೨೩.
ಪುಟಗಳು : ೧೦೮, ಬೆಲೆ : ರೂ.೩೦/-

ನವರತ್ನ ರಾಮರಾಯರಂತೆ ೬೫ರ ಇಳಿವಯಸ್ಸಿನಲ್ಲಿ ಸಾಹಿತ್ಯ ಸೃಷ್ಟಿಯನ್ನು ಆರಂಭಿಸಿರುವ ಶ್ರೀ ವಿಶ್ವನಾಥಯ್ಯನವರ "ಗ್ರಾಮ ಜೀವನ" ವು ಅವರ ಸಂಜೆಗಣ್ಣಿನ ಹಿನ್ನೋಟ—ಕಳೆದುಹೋದ ಅವರ ಬಾಲ್ಯದ ಗ್ರಾಮೀಣ ಜೀವನದ ಸುಂದರ ನೆನಪುಗಳು ಇಲ್ಲಿವೆ. ಪುಸ್ತಕ ಪುಟ್ಟದಾಗಿದ್ದರೂ ಮೂರು ನೆಲೆಗಳಲ್ಲಿ ಆ ಜೀವನವನ್ನು ಅವರು ಚಿತ್ರಿಸಿದ್ದಾರೆ. ಮೊದಲು ಸ್ವಂತ ಕುಟುಂಬದ ಜನರ ಚಿತ್ರಣ; ಅನಂತರ ತಮ್ಮ ಕುಟುಂಬ ನೆಲೆಗೊಳ್ಳಲು ಕಾರಣರಾದ ಉದಾರಿ ರಾಮೇಗೌಡರಿಂದ ಆರಂಭಿಸಿ, ಸಮಾಜದಲ್ಲಿ ನೆನಪು ಉಳಿಸುವಂತಹ ಗ್ರಾಮದ ವಿಶಿಷ್ಟ ವ್ಯಕ್ತಿಗಳ ಚಿತ್ರಣ; ಪುಸ್ತಕದ ಮೊದಲು ಹಾಗೂ ಕೊನೆಯಲ್ಲಿ ಗ್ರಾಮದ ಹಾಗೂ ಗ್ರಾಮೀಣ ಸಮಾರಂಭಗಳು, ಜನ ಸಮೂಹದ ಆತ್ಮೀಯ ಚಿತ್ರಣ. ಹಿಂದಿನ ಕಾಲದಲ್ಲಿ ಸಮಾಜದಿಂದ ಹೊರತಾಗಿ ವ್ಯಕ್ತಿ ವಿಶಿಷ್ಟತೆಗೆ ಬೆಲೆ ಇರಲಿಲ್ಲ.

ಆ ಕಾಲದ ಹಳಬರಂತೆ ಶ್ರೀವಿಶ್ವನಾಥಯ್ಯನವರದೂ ಈ ಗ್ರಾಮದ ಜಗತ್ತಿನೊಡನೆ ಬೆಸೆದುಕೊಂಡು ಬೆಳೆದ ವ್ಯಕ್ತಿತ್ವವಾಗಿದ್ದು, ಅವರ ಆತ್ಮಚರಿತ್ರೆಯೂ ಈ ಚಿತ್ರಗಳ ಭಾಗವಾಗಿ ಬಂದು ಜೀವನ ಸಮ್ಮುಖವಾದ ಶಾಂತಸ್ಥಾಯಿಯ ಆತ್ಮೀಯ ಚಿತ್ರಣ ಇಲ್ಲಿ ದೊರೆ ಯುತ್ತದೆ. ಅವರ ನೌಕರಿಯ ದಿನಗಳ ವಿವರಗಳು ಅಲ್ಲಲ್ಲಿ ನುಸುಳಿ ದರೂ, ಅವಕ್ಕೆ ಪ್ರಾಧಾನ್ಯ ಇಲ್ಲ; ಅವರ ವ್ಯಕ್ತಿತ್ವ, ಭಾವಲೋಕ ಗಳನ್ನು ನಿರ್ಮಿಸಿದ ಗ್ರಾಮಜೀವನದ ಚಿತ್ರಗಳಿಗೇ ಪ್ರಾಮುಖ್ಯ. "ಆಚಾರ್ಯದೇವೋ ಭವ" ಅಧ್ಯಾಯದಲ್ಲಿ ಮಾತ್ರ, ತಮ್ಮ ವ್ಯಕ್ತಿತ್ವ ನಿರ್ಮಾಣಕ್ಕೆ ಕಾರಣರಾದವರೆಂದು ಉಪಾಧ್ಯಾಯರನ್ನು ನೆನೆವಾಗ ನಗರವಾಸಿಗಳ ಚಿತ್ರಣ ಬರುತ್ತದೆ.

ಒಟ್ಟಿನಲ್ಲಿ ೬೦-೭೦ ವರ್ಷಗಳ ಹಿಂದಿನ ಈ ಗ್ರಾಮ ಜೀವನದ ಚಿತ್ರಗಳು ಆ ಕಾಲದ ಜೀವನಶ್ರದ್ಧೆ, ಜೀವನೋತ್ಸಾಹಗಳಿಂದ ಕೂಡಿ ಜನಪದ ಸಂಸ್ಕೃತಿಯ ಸಾರವನ್ನು ನಮಗೆ ತೋರಿಸಿಕೊಡುತ್ತವೆ. ಸಾಹಿತ್ಯಾಸಕ್ತರು ಗಮನಿಸಬೇಕಾದ ಕೃತಿ ಇದು.

—ಎಚ್.ಪಾಂಡುರಂಗ ವಿಠ್ಠಲ